ಕಡಮಿ ಆಗಿಲ್ಲ ಅನಿಸಿ ತುಸು ಗೆಲುವಾಗುವ ಹೊತ್ತಿಗೆ.

'ಏನಾಗಿತ್ತು ನಿಂಗೆ?' ಕಾಲಿನ ಹತ್ತಿರ ನಿಂತ ಮಗ ಧಡಕ್ಕನೆ ಕೇಳಿದ.

'ಕನಸೇನಾದ್ರೂ ಬಿತ್ತೇನು?' ಮಗಳ ಧ್ವನಿಯಲ್ಲಿ ಅಂತಃಕರಣವಿತ್ತು.

'ಆ್ಞಂ—ಊಂ' ಎಂದು ಏನಾದರೂ ಅರ್ಥಮಾಡಿಕೊಳ್ಳಲಿ ಎಂಬಂತೆ ಗೊಣಗಿ ಒಂಥರಾ ಆಯಾಸದಲ್ಲಿ ಶರಣಪ್ಪ ಅರೆಗಣ್ಣು ಮುಚ್ಚಿದ.

'ನಾವೆಲ್ಲ ಎಷ್ಟೊಂದು ಹೆದರಿಬಿಟ್ಟಿದ್ವಿ.' ಹೆಂಡತಿ ನಿಟ್ಟುಸಿರುಬಿಟ್ಟಾಗ ಮತ್ತೆ ಕಣ್ಣು ತೆರೆದ.

'ಯಾಕೆ— ಕೂಗಿದೆನೇನು?' ಕೇಳಿದ.

'ಇಲ್ಲ—ವದರಿದಿರಿ.'

ಹೆಂಡತಿ ಕೊಂಕಿದ ಕೂಡಲೇ ಶರಣಪ್ಪ ಪೆಚ್ಚಾದ, ಸುಮ್ಮನಾದ. ಇಷ್ಟು ಹೊತ್ತೂ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ಮಗ ಥಟ್ಟನೆ 'ಅಪ್ಪನಿಗೆ ಏನೂ ಆಗಿಲ್ಲ—ಬರ್ರಿ—ಬರ್ರೀ ಎಂದು ಆ ಕಡೆ ಸರಿದು ಹೋದ. ಮಗಳು ಹಿಂಬಾಲಿಸಿದಳು. ಇನ್ನೇನು ಹೆಂಡತಿಯೂ ಹೊಂಟುಬಿಡ್ತಾಳೆ ಎಂದು ಶರಣಪ್ಪ ಕಂಗಾಲು. ತನಗೆ ಅವಳ ಅವಶ್ಯಕತೆ ಇನ್ನಷ್ಟು ಐತಿ ಅನ್ನಿಸಿ ಎದ್ದವಳ ಕೈಹಿಡಿದು ಕೂಡಿಸಿ ಎದಿ ಮ್ಯಾಲ ಅಂಗೈ ತಬ್ಬಿಕೊಂಡ. ಹೆಂಡತಿ ಅವನಿಗೆ ಹಿತವಾಗುವಂತೆ ಎದೆ ನೇವರಿಸುತ್ತ ಕೇಳಿದಳು 'ಎಂಥ ಕನಸ್ರೀ ನಿಮಗೆ ಬಿದ್ದದ್ದು?'

**ಮತ್ತೆ ಕ್ಷಣ ತಡೆದು 'ನೀವು ಸುಮ್ಮಗ ಹೆದರಬ್ಯಾಡ್ರಿ. ನೀವೇನೂ ಅವರ ಹಂಗ ಕೋಟಿ ಕೋಟಿ ಹೊಡೆದಿಲ್ಲಲ್ಲ... ಉಗುಳು ನುಂಗಿದ್ರ ಹೊಟ್ಟಿ ತುಂಬ್ತದೇನು? ನೀವೇನಿದ್ರೂ ಚಿಲ್ಲರೆ ಮಂದಿ' ಅಂದವಳು ಇಷ್ಟಾದರೂ ಗಂಡ ಇನ್ನೂ ಮಾತಾಡದುದು ನೋಡಿ ಸಹಿಸಲಾಗದೆ 'ಈಗ ಆರಾಮಿದ್ದೀರಲ್ಲಾ?' ಕೇಳಿದಳು.**

'ಕನಸು... ಹುಂ...' ಎಂದು ಅವನು ಮರೆತು ಹೋಗಲಿದ್ದ, ಇನ್ನೇನು ಮನಸ್ಸಿನ ಆಳದೊಳಗ ಲೋಳೆಯ ಹಾಂಗ ಜಾರಿ ಹೋಗಲಿದ್ದ ಕನಸಿನ ಸರಕನ್ನು ಗಪ್ಪನೆ ಹಿಡಿದುಕೊಂಡವನಂತೆ ಹೇಳತೊಡಗಿದ, 'ಅದಕ್ಕೆ ತಲಿಬುಡ ಒಂದೂ ಇಲ್ಲ. ನಾನು ಎಲ್ಲಿಗೋ ಹೊಂಟಿದ್ದೆ. ದಾರಿ ಬರೇ ಹುದುಲು. ಕಾಲು ಅದರೊಳಗೆ ಸಿಗಿಬಿಳ್ತಿದ್ವು. ನಾನು ತಿಣುಕಿ ತಿಣುಕಿ ಕಾಲೆತ್ತಿ ನಡೀತಿದ್ದೆ. ಆ ಹೊತ್ತಿಗೆ ಸರಿಯಾಗಿ ಆಕಾಶದೊಳಗ ಒಂದು ಭಯಂಕರ ಕರೇ ಮೋಡ ತೇಲಿಬಂತು. ಅದು ನೆಟ್ಟಗ ನನ್ನ ತಲೀಮ್ಯಾಲ ಇಳೀಲಿಕ್ ಹತ್ತ್ಯು. ಅದರಿಂದ ಪಾರಾಗಿ ಓಡಲಿಕ್ಕೆ ಅವಕಾಶಾನ ಇರಲಿಲ್ಲ. ಅದು ಎಷ್ಟು ದೊಡ್ಡದಾಗಿತ್ತು ಅತಂದ್ರ... ಅದರ ಕೆಳಗೆ ನಾನು ಒಂದು ಇರಬಿಗಿಂತ ಕ್ಷುದ್ರ...'

'ಆಮ್ಯಲೇನಾತು?'

'ಅದರ ದಾಳಿಯಿಂದ ತಪ್ಪಿಸಿಕೊಳ್ಳಲು ಹೆಣಗಾಡಿದೆ. ಅದರ ಬುಡದೊಳಗ ಸಿಕ್ಕಿ ಸತ್ತೇಬಿಟ್ಟೆ ಎಂದು ಬೆದರಿ ಹೋದೆ. ಅದು ತಲೀ ಮ್ಯಾಲ ಬೀಳಧಂಗ ತಡೀಲಿಕ್ಕೆ ಅಂತರಿಕ್ಷಕ್ಕೆ ಕೈ ಚಾಚಿದೆ. ಕೂಗಿಕೊಂಡೆ. ಅಷ್ಟರೊಳಗ... ಸಂಡಾಸ್ ಆಗಿಬಿಟ್ಟಿತ್ತು.'

'ಥೋ...'

'ಕನಸಿನೊಳಗ ಮಾರಾಯ್ತೀ!...'